## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-2022-23 ನೇ ಸಾಲಿನಲ್ಲಿ ಕೆನರಾ ಬ್ಯಾಂಕ್ ನಿಂದ ಬೆಂಗಳೂರು ಸುತ್ತಮುತ್ತಲಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಪಡೆದಿರುವ ಅವಧಿ ಸಾಲಕ್ಕೆ ಬಡ್ಡಿಯನ್ನು ಜುಲೈ, ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್ ಮತ್ತು ನವೆಂಬರ್-2022ರ ಅಂತ್ಯಕ್ಕೆ ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-1.ಸರ್ಕಾರದ ಆದೇಶ ಸಂಖ್ಯೆ. ಲೋಇ/ಇ-71/ಇಎಪಿ/2017, ದಿ: 18-09-2017.
2.ಸರ್ಕಾರದ ಪತ್ರ ಸಂಖ್ಯೆ. ಲೋಇ/65/ಇಎಪಿ/2018 (ಪಿ-2), ದಿನಾಂಕ: 08-03-2019.
3.ಸರ್ಕಾರದ ಆದೇಶ ಸಂಖ್ಯೆ. ಲೋಇ/ಇ-69/ಇಎಪಿ/2020, ದಿನಾಂಕ: 26-02-2021.
4.ಸರ್ಕಾರದ ಪತ್ರ ಸಂಖ್ಯೆ.ಲೋಇ/80/ಇಎಪಿ/2021, ದಿನಾಂಕ: 12-03-2021.
5.ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ರವರ ಪತ್ರ ಸಂಖ್ಯೆ. ಕ.ರ.ಅ.ನಿನಿ/ಲೆ.ಶಾ/05/ಲೆ.ಪ/ಅವಧಿ ಸಾಲ/2022-23/3058, ದಿನಾಂಕ: 30-11-2022.

****

PRAMC
EIC 25/1/2023
SE-1
SE-2 3/1
DS
EE 30/01/23
AEE-1 30/1/2023
AEE-2
AEE-3
Upload to web site
AE-3
1839
25/1/23

ಪ್ರಸ್ತಾವನೆ:-

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಇಪಿಸಿ ಮಾದರಿಯಲ್ಲಿ ಬೆಂಗಳೂರು ಸುತ್ತಮುತ್ತಲಿನ 155 ಕಿಮೀ ಉದ್ದದ ರಸ್ತೆಗಳನ್ನು ರೂ.2095 ಕೋಟಿಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಓದಲಾದ (1)ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಮುಂದುವರೆದು, ಕಾರ್ಯಯೋಜನೆಗೆ ಭರಿಸಬೇಕಾದ ಯೋಜನಾ ಮೊತ್ತದ ಶೇ.50% ರಷ್ಟು ಸರ್ಕಾರದ ಅನುದಾನದಿಂದ ಹಾಗೂ ಶೇ.50 ರಷ್ಟನ್ನು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸಹಮತಿಸಿದೆ. ಮೇಲಿನಂತೆ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಮೊತ್ತದಲ್ಲಿ ಶೇ.50 ರಷ್ಟು ಸಾಲ ಮತ್ತು ಬಡ್ಡಿಯನ್ನು ಸರ್ಕಾರದ ಅನುದಾನದಿಂದ ಹಾಗೂ ಶೇ.50 ರಷ್ಟನ್ನು ಕೆಆರ್‌ಡಿಸಿಎಲ್ ಸಂಸ್ಥೆಯು ಟೋಲ್ ಸಂಗ್ರಹಣೆಯಿಂದ ಬರುವ ಸಂಪನ್ಮೂಲದಿಂದ ಮರುಪಾವತಿಸಲು ಸಹಮತಿಯನ್ನು ಓದಲಾದ (2)ರ ಪತ್ರದಲ್ಲಿ ನೀಡಲಾಗಿರುತ್ತದೆ.

2020-21 ಸಾಲಿನ ಆರ್ಥಿಕ ವರ್ಷದಲ್ಲಿ ರೂ.350.00 ಕೋಟಿಗಳನ್ನು ಅವಧಿ ಸಾಲಗಳ ಮೂಲಕ ಬ್ಯಾಂಕ್‌ಗಳಿಂದ ಸಂಗ್ರಹಿಸುವ ಪ್ರಸ್ತಾವನೆಗೆ ದಿನಾಂಕ 29-08-2020 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ off Budget Borrowings Monitoring Committee (OBBMC) ಸಭೆಯಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಂತೆ ಕೆನರಾ ಬ್ಯಾಂಕ್, ಇಂಡಸ್ಟ್ರಿಯಲ್ ಫೈನಾನ್ಸ್ ಬ್ರಾಂಚ್ ಬೆಂಗಳೂರು ಇವರು ಅವಧಿ ಸಾಲಕ್ಕೆ ಸರ್ಕಾರಿ ಖಾತರಿಯನ್ನು ಪಡೆದು ಸಲ್ಲಿಸುವ ನಿಬಂಧನೆಯಂತೆ ದಿನಾಂಕ 17-11-2020 ರ ಪತ್ರದಲ್ಲಿ ರೂ.350.00 ಕೋಟಿಗಳ ಅವಧಿ ಸಾಲವನ್ನು ಮಂಜೂರು ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

. . . . . 2

2020-21ನೇ ಸಾಲಿಗೆ Internal & External Budgetary Resources (IEBR) ಅಡಿಯಲ್ಲಿ ಕೆಆರ್‌ಡಿಸಿಎಲ್‌ಗೆ ಅವಧಿ ಸಾಲಗಳ (Term Loan) ಮೂಲಕ ರೂ.350.00 ಕೋಟಿಗಳ ಹಣ ಸಂಗ್ರಹಿಸಲು ಅನುಮೋದನೆ ಹಾಗೂ ಸರ್ಕಾರಿ ಖಾತರಿಗೆ ಕೆಲವು ಷರತ್ತು ಹಾಗೂ ನಿಬಂಧನೆಗೆ ಒಳಪಟ್ಟು ಓದಲಾದ (3)ರ ಪತ್ರದಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ.

2022-23ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ: 3054-80-190-0-01-ಋಣಸೇವೆಗಳು-240-ಬಡ್ಡಿ ಸಾಲ ಮೇಲುಸ್ತುವಾರಿ ಅಡಿಯಲ್ಲಿ ರೂ.4458.61 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಈಗಾಗಲೇ ಇಲ್ಲಿಯವರೆವಿಗೂ ರೂ.1194.06 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, (ಹುಡ್ಕೋ & ಕೆನರಾ ಬ್ಯಾಂಕ್ ಸಾಲಗಳಿಗೆ ಒಳಗೊಂಡಂತೆ ಒಟ್ಟು ರೂ.11,94,06,204.00 ಗಳು ಬಿಡುಗಡೆಯಾಗಿರುತ್ತದೆ) ರೂ.3264.55 ಲಕ್ಷಗಳು ಬಾಕಿ ಉಳಿದಿರುತ್ತದೆ.

ಮೇಲ್ಕಂಡಂತೆ ಮಂಜೂರಾಗಿರುವ 2020-21 ಹಾಗೂ 2021-22 ನೇ ಸಾಲಿಗೆ ಒಟ್ಟಾರೆ ರೂ.700.00 ಕೋಟಿಗಳ ಅವಧಿ ಸಾಲದ ಮೊತ್ತದಲ್ಲಿ ದಿನಾಂಕ: 18-04-2022ರ ಅಂತ್ಯಕ್ಕೆ ರೂ.500.00 ಕೋಟಿಗಳನ್ನು ಬ್ಯಾಂಕಿನಿಂದ ಪಡೆದು ಬೆಂಗಳೂರು ಸುತ್ತಮುತ್ತಲಿನ ಪ್ಯಾಕೇಜ್ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಬಳಕೆ ಮಾಡಿಕೊಳ್ಳಲಾಗಿರುತ್ತದೆ. ಬ್ಯಾಂಕಿನಿಂದ ಸೆಳೆದಿರುವ ಸಾಲಕ್ಕೆ ಕರಾರು ನಿಯಮಗಳಂತೆ ಕೆನರಾ ಬ್ಯಾಂಕ್, ಬೆಂಗಳೂರು ಇವರು ರೂ.14,15,04,197.00 ಗಳ ಡಿಮ್ಯಾಂಡ್ ಅನ್ನು ಕ್ರಮವಾಗಿ ಜುಲೈ-2022, ಆಗಸ್ಟ್-2022, ಸೆಪ್ಟಂಬರ್-2022, ಅಕ್ಟೋಬರ್-2022 ಮತ್ತು ನವೆಂಬರ್-2022ರ ಅಂತ್ಯಕ್ಕೆ ಕಳುಹಿಸಿದ್ದು, ಇದು ಕೆನರಾ ಬ್ಯಾಂಕಿನಿಂದ ಪಡೆದಿರುವ ಮೊದಲ ಮತ್ತು 2ನೇ ಟ್ರಾಂಚಿನ ಸಾಲದ ಮೇಲಿನ ಬಡ್ಡಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಆದಕಾರಣ, ಕೆನರಾ ಬ್ಯಾಂಕ್‌ನಿಂದ ಪಡೆದಿರುವ ಅವಧಿ ಸಾಲಕ್ಕೆ ಅಸಲು ಸಾಲದ ಮೇಲಿನ ಬಡ್ಡಿಯನ್ನು ಪಾವತಿಸಲು ಜುಲೈ-2022, ಆಗಸ್ಟ್-2022, ಸೆಪ್ಟಂಬರ್-2022, ಅಕ್ಟೋಬರ್-2022 ಮತ್ತು ನವೆಂಬರ್-2022ರ ಅಂತ್ಯಕ್ಕೆ ರೂ.14,15,04,197.00 ಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ಲೆಕ್ಕಶೀರ್ಷಿಕೆ: 3054-80-190-0-01- ಋಣಸೇವೆಗಳು-240-ಬಡ್ಡಿ ಸಾಲ ಮೇಲುಸ್ತುವಾರಿ ಅಡಿಯಲ್ಲಿ ಬಿಡುಗಡೆ ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಕೋರಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ; ಲೋಇ ಇ-315 ಇಎಪಿ 2021 ಬೆಂಗಳೂರು, ದಿನಾಂಕ: 12-01-2023**

ಬೆಂಗಳೂರು ಸುತ್ತಮುತ್ತಲಿನ 155 ಕಿಮೀ ಉದ್ದದ 4 ರಸ್ತೆಗಳ 10 ಪ್ಯಾಕೇಜ್‌ಗಳನ್ನು ಕೆಆರ್‌ಡಿಸಿಎಲ್ ವತಿಯಿಂದ ಇಪಿಸಿ ಮಾದರಿಯಲ್ಲಿ ರಸ್ತೆ ಅಭಿವೃದ್ಧಿಪಡಿಸಲು ಕೆನರಾ ಬ್ಯಾಂಕ್ ನಿಂದ ಪಡೆದಿರುವ ಅವಧಿ ಸಾಲಕ್ಕೆ ಅಸಲು ಸಾಲದ ಮೇಲಿನ ಬಡ್ಡಿಯನ್ನು ಪಾವತಿಸಲು ಲೆಕ್ಕಶೀರ್ಷಿಕೆ : 3054-80-190-0-01-240- ಋಣಸೇವೆಗಳು- ಬಡ್ಡಿ ಸಾಲ ಮೇಲುಸ್ತುವಾರಿ ಅಡಿಯಲ್ಲಿ ಜುಲೈ, ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್ ಮತ್ತು ನವೆಂಬರ್-2022ರ ಅಂತ್ಯಕ್ಕೆ ರೂ.14,15,04,197.00 ಗಳನ್ನು (ಹದಿನಾಲ್ಕು ಕೋಟಿ ಹದಿನೈದು ಲಕ್ಷದ ನಾಲ್ಕು ಸಾವಿರದ ಒಂದು ನೂರ ತೊಂಭತ್ತೇಳು ರೂಪಾಯಿಗಳು ಮಾತ್ರ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಹಣ ಬಿಡುಗಡೆ ಮಾಡಲಾಗಿದೆ.

. . . . . 3

ಹೀಗೆ ಬಿಡುಗಡೆ ಮಾಡಲಾದ ಹಣವನ್ನು ಡ್ರಾ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಸಹಾಯಾನುದಾನ ಸ್ವೀಕರ್ತನ ರಸೀದಿ (Grant in Aid Payee receipt) ಬಿಲ್ಲನ್ನು ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಇವರಿಗೆ ಸಲ್ಲಿಸಿ ಮೇಲುರುಜು ಮಾಡಿಸಿ, ಈ ಸ್ವೀಕರ್ತ ರಸೀದಿಯನ್ನು ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಗೆ ಸಲ್ಲಿಸಿ ಡ್ರಾ ಮಾಡತಕ್ಕದ್ದು.

ಈ ಹಣ ಬಿಡುಗಡೆ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2022, ದಿನಾಂಕ 23-09-2022 ರಲ್ಲಿ ಸಹಮತಿಸಿರುವಂತೆ ಆಡಳಿತ ಇಲಾಖೆಯ ಕಾರ್ಯದರ್ಶಿ ರವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

12/1/2023

**(ರಾಮಚಂದ್ರಪ್ಪ ಕೆ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಬಾಹ್ಯ ಅನುದಾನಿತ ಯೋಜನೆಗಳು (ಇಎಪಿ)
ಲೋಕೋಪಯೋಗಿ ಇಲಾಖೆ

**ಪ್ರತಿಯನ್ನು :-**

1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
7. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, (ಲೋಕೋಪಯೋಗಿ ಆರ್ಥಿಕ ಕೋಶ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಜಂಟಿ ನಿರ್ದೇಶಕರು, ಸ್ಟೇಟ್ ಹುಜೂರ್ ಟ್ರೆಷರಿ, ಕೆ.ಆರ್.ಸರ್ಕಲ್, ಬೆಂಗಳೂರು.
9. ಜಂಟಿ ನಿರ್ದೇಶಕರು, ಟಿ.ಎನ್.ಎಮ್.ಸಿ ಖನಿಜ ಭವನ, ಬೆಂಗಳೂರು.
10. ಮುಖ್ಯ ಇಂಜಿನಿಯರ್, PRAMC, ಲೋಕೋಪಯೋಗಿ ಇಲಾಖೆ, ಕೆಆರ್ ವೃತ್ತ, ಬೆಂಗಳೂರು ರವರಿಗೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
11. ಹೆಚ್ಚುವರಿ ಪ್ರತಿಗಳು.